**ವ್ಯಾಖ್ಯಾನ**

# <u>ಮಾನವ ಜನ್ಮ ದೊಡ್ಡದು</u>

1. **Ref.**: Haridasa Taranga Part-1, Published by M/s. Vyaasaanandadasa Pratishtaana, Bengaluru-98, First Edition 2014, page No. 59.
2. **Author:** Pandith Srinivasa S Mathada.

**ಶ್ರೀ ಪುರಂದರ ದಾಸರ ಕೀರ್ತನೆಯ ಚಿಂತನೆ:**

ಶ್ರೀ ಪುರಂದರದಾಸರು ಮಾನವ ಜನ್ಮದ ಮಹತಿಯನ್ನು ವಿವರಿಸುತ್ತ ಮಾನವರ ನಡತೆ ರೀತಿ ನೀತಿಗಳನ್ನು ಚೆನ್ನಾಗಿ ನಿರೂಪಿಸಿದ್ದಾರೆ.

**ಮಾನವ ಜನ್ಮ ದೊಡ್ಡದು ಇದ**
**ಹಾನಿ ಮಾಡಲು ಬೇಡಿ ಹುಚ್ಚಪ್ಪಗಳಿರಾ** ॥ ಪ ॥

ಮಾನವ ಜನ್ಮ ದೊರಕುವದು ಅತಿ ದುರ್ಲಭ ಮತ್ತು ಅಷ್ಟೇ ಮಹತ್ವಪೂರ್ಣವೂ ಹೌದು. ಅದು ದೊರೆತಾಗ ಹಾನಿಮಾಡಿಕೊಳ್ಳದೇ ಪರಮಾತ್ಮನ ಅನುಗ್ರಹ ಸಂಪಾದನೆ ಮಾಡಿಕೊಳ್ಳಬೇಕು ಎಂಬುದಾಗಿ ಶ್ರೀ ಪುರಂದರದಾಸರು ಇಲ್ಲಿ ಸಮಸ್ತ ಮಾನವ ಜನಾಂಗಕ್ಕೆ ಎಚ್ಚರಿಕೆ ನೀಡಿದ್ದಾರೆ. ಮೊದಲನೆಯದಾಗಿ "ಮನು" ಅವಬೋಧನೇ ಎಂಬ ಧಾತುವಿನಿಂದ 'ಮಾನವ' ಜನ್ಮವು ನಿಷ್ಪನ್ನವಾಗಿದೆ. ಪರಮಾತ್ಮನನ್ನು ತಿಳಿದುಕೊಳ್ಳುವ ಬುದ್ಧಿಸಾಮರ್ಥ್ಯವನ್ನು ಹೊಂದಿರುವುದರಿಂದ ಮಾನವನು ಇತರ ಸಕಲ ಪ್ರಾಣಿಗಳಿಗಿಂತ ಶ್ರೇಷ್ಠತೆಯನ್ನು ಪಡೆದಿದ್ದಾನೆ. ಅಂತೆಯೇ ಈ ಮಾನವ ಜನ್ಮವು ಕೂಡ ಶ್ರೇಷ್ಠತ್ವವನ್ನು ಹೊಂದಿದೆ.

ಈಗ ಮಾನವ ಜನ್ಮದ ವೈಶಿಷ್ಟ್ಯವೇನೆಂಬುದನ್ನು ತಿಳಿಯಲು ಪ್ರಯತ್ನಿಸುವಾ –

ಸಹಿ ಪ್ರಜ್ಞಾನೇನ ಸಂಪನ್ನತಮಃ । ವಿಜ್ಞಾತಂ ವದತಿ । ವಿಜ್ಞಾತಂ ಪಶ್ಯತಿ । ವೇದ ಶ್ವಸನಂ । ವೇದಲೋಕಾ–ಲೋಕಂ । ಮರ್ತೇನ ಅಮೃತಮೀಪ್ಸತಿ । ಅಥಾನ್ಯೇಷಾಂ ಪಶೂನಾಂ ಅಶನಾಯಾ ಪಿಪಾಸೇ ಏವ ಅಭಿವಿಜ್ಞಾನಂ ॥

ಉಳಿದ ಪ್ರಾಣಿಗಳಿಗಿಂತ ಮನುಷ್ಯ ಬೌದ್ಧಿಕವಾಗಿ ಸಿರಿವಂತನಾಗಿದ್ದಾನೆ. ಅವನು ವಿಚಾರ ಮಾಡಿ ಮಾತಾಡುತ್ತಾನೆ. ಆಲೋಚಿಸುತ್ತಾನೆ. ನಾಳೆಯ ಅರಿವಿದೆ. ಲೋಕಾಲೋಕಗಳನ್ನು ತಿಳಿದಿದ್ದಾನೆ. ನಶ್ವರದಿಂದ ಶಾಶ್ವತಲೋಕವನ್ನು ಬಯಸುತ್ತಾನೆ. ಆದರೆ ಉಳಿದ ಪಶುಪ್ರಾಣಿಗಳಿಗೆ ಮಾತ್ರ ತಿಂದು ಕುಡಿದು ತೃಪಿಪಡುವುದರಲ್ಲೇ–ಯೋಚನೆಯೆಂದು ಉಪನಿಷತ್ತಿನಲ್ಲಿ ಹೇಳಲಾಗಿದೆ.

ಇದನ್ನೇ ಸುಭಾಷಿತವೊಂದು ಹೀಗೆ ತಿಳಿಸುತ್ತದೆ.

**ಆಹಾರ ನಿದ್ರಾ ಭಯ ಮೈಥುನಾನಿ ಸಮಾನ ಮೇತತ್ ಪಶುಭಿರ್ನರಾಣಾಮ್ ।**
**ಏಕೋ ವಿವೇಕೋ ಹ್ಯಧಿಕೋ ಮನುಷ್ಯಂ ತೇನೈವ ಹೀನಃ ಪಶುಭಿಃ ಸಮಾನಃ ॥**

ಶ್ರೀವೇದವ್ಯಾಸರು ಈ ಮಾನವ ಸೃಷ್ಟಿಯ ಉದ್ದೇಶ ವೈಶಿಷ್ಟ್ಯಗಳ – ಬಗೆಗೆ ಶ್ರೀಮದ್ ಭಾಗವತದಲ್ಲಿ ಹೀಗೆ ತಿಳಿಸಿದ್ದಾರೆ.

**ಬಹ್ವ್ಯಃ ಸಂತಿ ಪುರಃ ಸೃಷ್ಟಾಸ್ತಾಸಾಂ ಮೇ ಮಾನುಷೀಪ್ರಿಯಾ । (11–7–22)**
**ಅತ್ರಮಾಂ ಮಾರ್ಗಯಂತ್ಯಾದ್ಧಾ ಯುಕ್ತಾ ಹೇತುಭಿರೀಶ್ವರಮ್ ॥ (11–7–25)**

"ನನ್ನ ಸೃಷ್ಟಿಯಲ್ಲಿ ಮಾನವ ಸೃಷ್ಟಿಯು ನನಗೆ ಪ್ರಿಯವಾದುದು. ಕಾರಣವೆಂದರೆ – ಈ ಮಾನವ ಸೃಷ್ಟಿ ತನ್ನ ಸೃಷ್ಟಿಕರ್ತನನ್ನು ಅನ್ವೇಷಿಸುತ್ತದೆ.

ಹಿಂದಕ್ಕೆ ಶ್ರೀಹರಿಯಿಂದ ಸೃಷ್ಟರಾದ ದೇವತೆಗಳು ತಮಗೆ ಆಶ್ರಯ ಸ್ಥಾನವನ್ನು ಕೊಡುವಂತೆ ಪ್ರಾರ್ಥಿಸಿದರು.

ಶ್ರೀಹರಿಯು ಕುದುರೆಯನ್ನು ತೋರಿಸಿದ; ದೇವತೆಗಳು ಸಾಲದೆಂದರು. ಹಸುವನ್ನು ತೋರಿಸಿದ. ಅದೂ ಸಾಲದೆಂದರು. ನಂತರ "ತಾಭ್ಯಃ ಪುರುಷ ಮಾನಯತ ತಾ ಅಬ್ರುವನ್ ಸುಕೃತಂ ಬತೇತಿ" – ಎಂಬಂತೆ ಮನುಷ್ಯನನ್ನು ತೋರಿಸಿದ. ಎಲ್ಲರೂ ಒಪ್ಪಿಕೊಂಡರು. ಹಾಗೂ ಅದರಲ್ಲಿ ಪ್ರವೇಶಿಸಿದರು. ಹೀಗೆ ಮನುಷ್ಯ ಶರೀರವು ಸಕಲ ದೇವತೆಗಳ ಆಶ್ರಯವೆನಿಸಿತು. ಮನುಷ್ಯ ಶರೀರವು "ಅಮೃತತ್ವ" ವನ್ನು ಪಡೆಯಲು ಪರಮ ಸಾಧನವೆನಿಸಿದೆ. ಇದನ್ನೇ "ದುರ್ಲಭಂ ಮಾನುಷಂ ಜನ್ಮತದಪ್ಯಧ್ರುವಮರ್ಥ ದಮ್" ಎಂಬುದಾಗಿ ಶ್ರೀ ಪ್ರಹ್ಲಾದರಾಜರು ಹೇಳಿದ್ದಾರೆ.

ಇಂಥ ಉತ್ತಮವಾದ ಮಾನವ ಜನ್ಮವನ್ನು ಪಡೆದವನಾಗಿ – "ಮೋಕ್ಷ"ಕ್ಕಾಗಿ ಪ್ರಯತ್ನಿಸದಿರುವವರನ್ನು ಕಂಡು ಶ್ರೀಪುರಂದರದಾಸರು ಈ ಜನ್ಮ ದೊಡ್ಡದು–ಹಾನಿ ಮಾಡಿ ಕೊಳ್ಳಬೇಡಿ ಎಂದಿದ್ದಾರೆ. ಇಲ್ಲಿ "ಹಾನಿ" ಎಂದರೆ ಯಾವುದು ? ಶ್ರೀಮದಾಚಾರ್ಯರು ಶ್ರೀಕೃಷ್ಣಾಮೃತ ಮಹಾರ್ಣವ ಗ್ರಂಥದಲ್ಲಿ ಹೀಗೆ ಅಪ್ಪಣೆ ಕೊಡಿಸಿದ್ದಾರೆ.

**ಸಾ ಹಾನಿಃ ತನ್ಮಹಚ್ಛಿದ್ರಂ ಸಾಚಾಂಧ ಜಡಮೂಕತಾ ।**

**ಯನ್ಮುಹೂರ್ತಂ ಕ್ಷಣಂವಾಪಿ ವಾಸುದೇವೋ ನ ಚಿಂತ್ಯತೆ ॥** (47ನೇ ಶ್ಲೋಕ)

ಭಗವಂತನ ಚಿಂತನೆ ಇಲ್ಲದೇ ಕಳೆದ ಒಂದೊಂದು ಕ್ಷಣವೂ, ಮುಹೂರ್ತವೂ ದೊಡ್ಡ ಹಾನಿಯೇ ಸರಿ. ದೊಡ್ಡ ಪಾಪವೂ ಕೂಡ. ಅದೇ ಜೀವನದ ಕುರುಡು, ಜೀವನದ ಜಾಡ್ಯ ಹಾಗೂ ಮೂಕತೆಯು.

ಈ ಮಾನವ ಜನ್ಮವು ಸಾರ್ಥಕವಾಗಬೇಕಾದರೆ ಪರಮಾತ್ಮನ ಸ್ಮರಣೆ ಅತೀ ಅವಶ್ಯವು. ಇದನ್ನು ಶ್ರೀಮದಾಚಾರ್ಯರು ಈ ರೀತಿ ತಿಳಿಸಿದ್ದಾರೆ.

**ಕಲಿಕಲ್ಮಷ ಮತ್ಯುಗ್ರಂ ನರಕಾರ್ತಿಪ್ರದಂ ನೃಣಾಂ ।**

**ಪ್ರಯಾತಿ ವಿಲಯಂ ಸದ್ಯಃ ಸಕೃತ್ಸಂಕೀರ್ತಿತೇಽಚ್ಯುತೇ ॥** (ಶ್ರೀ ಕೃ.ಮ. 58)

ಕಲಿಕಾಲದಲ್ಲಿ ಕಲಿಕಲ್ಮಷವು ಅತ್ಯುಗ್ರವಾದುದು. ಅದು ನರಕಾದಿ ಅನರ್ಥಗಳನ್ನು ಕೊಡಬಲ್ಲುದು. ಆದರೆ ಭಗವನ್ನಾಮ ಸಂಕೀರ್ತನೆಯು ಇದೆಲ್ಲವನ್ನು ನಾಶಮಾಡಲು ಸಮರ್ಥವಾಗಿದೆ. ಕಾರಣ ಭಗವಂತನ ಸ್ಮರಣೆ ಮಾಡಿ ಈ ಸಂಸಾರ ಸಾಗರದಿಂದ ಮಾನವರು ಪಾರಾಗಬೇಕು.

"Man is an architect of his own life" ಎಂಬ ಇಂಗ್ಲೀಷ್ ಗಾದೆಯು ಮಾನವನು ತನ್ನ ಜೀವನದ ಶಿಲ್ಪಿಯಾಗಿದ್ದಾನೆಂದು ತಿಳಿಸುತ್ತದೆ. ಹೀಗಿರುವದರಿಂದ ಮಾನವರು ಭಗವಂತನ ನಿರಂತರ ಚಿಂತನ, ಸ್ಮರಣೆಗಳನ್ನು ಮಾಡಿ ಜನ್ಮವನ್ನು ಸಾರ್ಥಕಮಾಡಿಕೊಳ್ಳಬೇಕೆಂಬುದಾಗಿ ಶ್ರೀಪುರಂದರದಾಸರು ಒತ್ತಿ ಹೇಳಿರುವುದನ್ನು ಪ್ರತಿಯೊಬ್ಬರೂ ಗಮನಿಸಬೇಕು.

**ಕಣ್ಣು ಕೈಕಾಲ್ ಕಿವಿ ನಾಲಿಗೆ ಇರಲಿಕ್ಕೆ**
**ಮಣ್ಣು ಮುಕ್ಕಿ ಮರುಳಾಗುವರೆ**
**ಹೆಣ್ಣು ಮಣ್ಣಿಗಾಗಿ ಹರಿಯ ನಾಮಾಮೃತವ**
**ಉಣ್ಣದೇ ಉಪವಾಸ ಇರುವರೇ ಖೋಡಿ** ॥ **1** ॥

ಪರಮಾತ್ಮನು ಮಾನವನಿಗೆ ಕಣ್ಣು, ಕೈ, ಕಾಲು, ಕಿವಿ, ನಾಲಿಗೆ ಮುಂತಾದ ಉಪಯುಕ್ತವಾದ ಎಲ್ಲ ಅಂಗಗಳನ್ನು ದಯಪಾಲಿಸಿದ್ದಾನೆ. ಹೀಗಿರುವಾಗ ಹೆಣ್ಣು ಹೊನ್ನು ಉಪಯೋಗಿಸಿದಲ್ಲಿ ಮಾನವ ಜೀವನವು ನಿರರ್ಥಕವೆನಿಸುತ್ತದೆ. ಪರಮಾತ್ಮನ ಸೇವೆಗೆ ಈ ಮಣ್ಣಿಗಾಗಿ ಅಂದರೆ ಇವುಗಳನ್ನೇ ಸಂಪಾದಿಸುವದಕ್ಕಾಗಿ ಮಾತ್ರ ಈ ಅಂಗಗಳನ್ನು ಅಂಗಗಳನ್ನು ಉಪಯೋಗಿಸಿಕೊಂಡು ನಾಲಿಗೆಯಿಂದ ಶ್ರೀಹರಿಯ ನಾಮಾಮೃತವನ್ನು ಉಣ್ಣುವುದಾದರೆ ಈ ಮಾನವ ಜನವು ಸಾರ್ಥಕವೆನಿಸುವದೆಂದು ಶ್ರೀಪುರಂದರದಾಸರು ಇಲ್ಲಿ ತಿಳಿಸಿದ್ದಾರೆ.

ಶ್ರೀಮದ್ ಭಾಗವತದಲ್ಲಿ ಹೀಗೆ ತಿಳಿಸಿದ್ದಾರೆ.

**ವಾಣೀಗುಣಾನು ಕಥನೇ ಶ್ರವಣೌ ಕಥಾಯಾಂ**
**ಹಸ್ತೌ ಚ ಕರ್ಮಸು ಮನಸ್ತವ ಪಾದಯೋರ್ನಃ** ॥
**ಸ್ಮೃತ್ಯಾಂ ಶಿರಸ್ತವ ನಿವಾಸ ಜಗತ್ಪ್ರಣಾಮೇ**
**ದೃಷ್ಟಿಃ ಸತಾಂ ದರ್ಶನೇಽಸ್ತು ಭವತ್ತನೂನಾಮ್** ॥ (10–10–38)

ನಮ್ಮ ವಾಣಿಯು ಭಗವಂತನ ಗುಣಗಳನ್ನು ಸ್ತುತಿಸುವದರಲ್ಲಿ ಕಿವಿಗಳು ಭಗವಂತನ ಕಥೆ ಕೇಳುವುದರಲ್ಲಿ ಕೈಗಳು ಭಗವತ್ ಸೇವೆಯಲ್ಲಿ ಮನಸ್ಸು ಪಾದಸ್ಮರಣೆಯಲ್ಲಿ ತಲೆಯು ಭಗವಂತನನ್ನು ನಮಸ್ಕರಿಸುವುದರಲ್ಲಿ, ದೃಷ್ಟಿಯು ಚಲಪ್ರತಿಮೆಗಳೆನಿಸಿದ ಸಜ್ಜನರ ದರ್ಶನದಲ್ಲಿ ಆಸಕ್ತವಾಗಿರಬೇಕು. ಒಟ್ಟಿನಲ್ಲಿ ನಮ್ಮ ಪ್ರತಿಯೊಂದು ಅವಯವವು ಪರಮಾತ್ಮನ ಸೇವೆಗೆ ಮೀಸಲಾಗಿರಬೇಕೆಂದು ಇಲ್ಲಿ ತಿಳಿಸಿದ್ದಾರೆ.

ಹೆಣ್ಣು, ಹೊನ್ನು, ಮಣ್ಣು ಇವುಗಳಿಗಾಗಿ ಪರದಾಡುತ್ತ ಶ್ರೀಹರಿಯ ನಾಮಾಮೃತವನ್ನು ಸವಿಯದೇ ಇದ್ದರೆ ಅದೊಂದು ಮಾನವರ ಮೂರ್ಖತನವೆನ್ನುತ್ತಾರೆ ಶ್ರೀದಾಸರು.

**ಯುಕ್ತ ಇತ್ಯುಚ್ಯತೇ ಯೋಗೀ ಸಮಲೋಷ್ಟಾತ್ಮಕಾಂಚನಃ** । (ಗೀತಾ 6–8)

ಗೀತೆಯಲ್ಲಿ ಮಣ್ಣು ಕಲ್ಲು ಬಂಗಾರ ಇವುಗಳನ್ನು ಸಮನಾಗಿ ನೋಡುವವನು ಯೋಗ್ಯನೆಂಬುದಾಗಿ ತಿಳಿಸಿರುವರು. ಕಾರಣ ಇವುಗಳಿಗಾಗಿ ತಲೆಕೆಡಿಸಿಕೊಳ್ಳದೇ ಪರಮಾತ್ಮನ ನಾಮಸ್ಮರಣೆ ಮಾಡುತ್ತ ಇರುವ ಜೀವನವು ಸಾರ್ಥಕವೆನಿಸುತ್ತದೆ.

**ಕಾಲನ ದೂತರು ಕಾಲ್‌ಪಿಡಿದೆಳೆವಾಗ**
**ತಾಳು ತಾಳೆಂದರೆ ತಾಳುವರೇ**
**ದಾಳಿ ಬಾರ ಮುನ್ನ ಧರ್ಮವ ಗಳಿಸಿರೋ**
**ಸುಳ್ಳಿನ ಸಂಸಾರ ಸುಳಿಗೆ ಸಿಕ್ಕಲು ಬೇಡಿ** ॥ **3** ॥

ಯಮದೂತರು ಈ ಜೀವನನ್ನು ಸೆಳೆದುಕೊಂಡು ಹೋಗಲು ಯಾವಾಗ ಬರುವರೋ ತಿಳಿಯದು. ಅವರು ಸೆಳೆಯಲು ಬಂದಾಗ ತಾಳು ಎಂದು ಹೇಳಿದರೆ ತಾಳರು, ಅದು ಸಾಧ್ಯವಿಲ್ಲದ ಮಾತು. ಕಾರಣ ಮಾನವನ ಶರೀರಕ್ಕೆ ದಾಳಿ ಬರುವ ಮೊದಲು ಅಂದರೆ ಇದು ಬಿದ್ದು ಹೋಗುವ ಮೊದಲು ಧರ್ಮವನ್ನು ಗಳಿಸಬೇಕಾದುದು ಅತೀ ಅವಶ್ಯವು. ಈ ಸಂಸಾರವು ಮತ್ತೆ ಮತ್ತೆ ಬಂಧನವನ್ನೇ ತಂದುಕೊಡುವದರಿಂದ ಈ ಸುಳಿಯಿಂದ ಪಾರಾಗಲು ಯತ್ನಿಸುವದು ಯೋಗ್ಯವಾಗಿದೆ. ಧರ್ಮ ಕಾರ್ಯಗಳನ್ನು ನಿರಂತರ ಮಾಡುತ್ತ ಇರಬೇಕು. ಧರ್ಮ ಸಂಗ್ರಹವನ್ನು ತಪ್ಪದೇ ಮಾಡಿ ನಿತ್ಯ ಸುಖಭಾಗಿಗಳಾಗಬೇಕು. ಇದನ್ನೇ ಶ್ರೀಮನ್ ಮಹಾಭಾರತಕಾರರು ಹೀಗೆ ಹೇಳುತ್ತಾರೆ.

**ಕೋಹಿ ಜಾನಾತಿ ಕಸ್ಮಾದ್ಯ ಮೃತ್ಯುಕಾಲೋ ಭವಿಷ್ಯತಿ ।**
**ಯುವೈವ ಧರ್ಮಶೀಲಃ ಸ್ಯಾತ್ ಅನಿತ್ಯಂ ಖಲು ಜೀವಿತಮ್ ॥**

ಮನುಸ್ಮೃತಿಕಾರರು ಹೀಗೆ ಹೇಳುತ್ತಾರೆ –

**ಮೃತಂ ಶರೀರಮುತ್ಸೃಜ್ಯ ಕಾಷ್ಠಲೋಷ್ಠ ಸಮಂ ಕ್ಷಿತೌ ।**
**ವಿಮುಖಾ ಬಾಂಧವಾ ಯಾಂತಿ ಧರ್ಮಸ್ತಮನುಗಚ್ಛತಿ ॥**

**ತಸ್ಮಾದ್ಧರ್ಮಂ ಸಹಾಯಾರ್ಥಂ ನಿತ್ಯಂ ಸಂಚಿನುಯಾತ್ ಶನೈಃ ।**
**ಧರ್ಮೇಣ ಹಿ ಸಹಾಯೇನ ತಮಸ್ತರತಿ ದುಸ್ತರಮ್ ॥**

ಸುಭಾಷಿತಕಾರರು ಧರ್ಮ ಸಂಗ್ರಹ ಮಾಡುವ ಕುರಿತು ಹೀಗೆ ಹೇಳುತ್ತಾರೆ

**ಅನಿತ್ಯಾನಿ ಶರೀರಾಣಿ ವಿಭವೋ ನೈವ ಶಾಶ್ವತಃ ।**
**ನಿತ್ಯಂ ಸನ್ನಿಹಿತೋ ಮೃತ್ಯುಃ ಕರ್ತವ್ಯೋ ಧರ್ಮ ಸಂಗ್ರಹಃ ॥**

ಹಾಗೂ "ಗೃಹೀತ ಇವ ಕೇಶೇಷು ಮೃತ್ಯುನಾ ಧರ್ಮಮಾಚರೇತ್" ಎಂಬಂತೆ ಮೃತ್ಯುವಿನಿಂದ ನಾವು ಹಿಡಿಯಲ್ಪಟ್ಟಿದ್ದೇವೆಂದು ತಿಳಿದು ನಿತ್ಯವೂ ಧರ್ಮವನ್ನು ಆಚರಿಸುತ್ತಿರಬೇಕು. ಶ್ರೀದಾಸರು ಸಂಸಾರ ಸುಳಿಗೆ ಸಿಕ್ಕಬೇಡಿ ಎಂಬುದಾಗಿ ಎಚ್ಚರಿಕೆ ನೀಡಿದ್ದಾರೆ.

**ಏನು ಕಾರಣ ಯದುಪತಿಯ ಮರೆತಿರಿ**
**ಧನಧಾನ್ಯ ಸತಿಸುತರು ಕಾಯುವರೆ ।**
**ಇನ್ನಾದರೂ ಏಕೋಭಾವದಿ ಭಜಿಸಿರೋ**
**ಚೆನ್ನ ಶ್ರೀಪುರಂದರವಿಠ್ಠಲರಾಯನ** ॥ 3 ॥

ಪ್ರತಿಯೊಬ್ಬ ಮಾನವನು ತನ್ನ ಜೀವಿತ ಕಾಲದಲ್ಲಿ ತನ್ನನ್ನು ಧನ, ಧಾನ್ಯ, ಸತಿ, ಸುತರು ರಕ್ಷಿಸುವರು ಎಂಬುದಾಗಿ ಭಾವಿಸುತ್ತಾನೆ. ಇದು ಸಾಧ್ಯವಿಲ್ಲದ ಮಾತು. ಮಾನವರನ್ನು, ಚರಾಚರ ವಸ್ತುಗಳೆಲ್ಲವನ್ನು ರಕ್ಷಿಸುವವನು ಭಗವಂತನೊಬ್ಬನೆ ಕಾರಣ ಯದುಪತಿಯಾದ ಭಗವಂತನನ್ನು ಮರೆಯಲಾಗದು. "ಯದನುಗ್ರಹತಃ ಸಂತಿ ನ ಸಂತಿ ಯದುಪೇಕ್ಷಯಾ" ಎಂದಿರುವದರಿಂದ ಆ ಭಗವಂತನ ಅನುಗ್ರಹ ಸಂಪಾದನೆಗಾಗಿ ಒಮ್ಮನಸ್ಸಿನಿಂದ ಅನನ್ಯಭಾವದಿಂದ ಭಜಿಸಬೇಕೆಂದು ಶ್ರೀದಾಸರು ಇಲ್ಲಿ ತಿಳಿಸಿದ್ದಾರೆ.

ಯದುವತಿಯಾದ ಶ್ರೀಕೃಷ್ಣನನ್ನು ಮರೆಯಲಾಗದು ಕಾರಣವೆಂದರೆ – ಶ್ರೀಮದ ಭಗವದ್ಗೀತೆಯಲ್ಲಿ ಕೆಳಗಿನಂತೆ ಅಭಯಕೊಟ್ಟಿದ್ದಾನೆ.

**ಅನನ್ಯಾಶ್ಚಿಂತಯಂತೋ ಮಾಂ ಯೇ ಜನಾಃ ಪರ್ಯುಪಾಸತೇ ।**
**ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಮ್** ॥ (9–22)

ಅನನ್ಯಭಾವದಿಂದ, ಏಕೋಭಾವದಿಂದ, ಭಗವಂತನನ್ನು ಸರ್ವೋತ್ತಮನ ಭಜಿಸಿದಲ್ಲಿ ಭಗವಂತನು ಪುನರಾವೃತ್ತಿ ರಹಿತವಾದ ಮೋಕ್ಷವನ್ನು ಕೊಟ್ಟು ರಕ್ಷಿಸುವದು ನಿಶ್ಚಿತವು.

**ನಾಮುತ್ರಹಿ ಸಹಾಯಾರ್ಥಂ ಪಿತಾಮಾತಾ ಚ ತಿಷ್ಠತಃ ।**
**ನ ಪುತ್ರದಾರಾ ನ ಜ್ಞಾತಿಃ ಧರ್ಮಸ್ತಿಷ್ಠತಿ ಕೇವಲಃ ॥**

ಎಂಬ ಮನುಸ್ಮೃತಿ ವಾಕ್ಯದಂತೆ ಸತಿಸುತರು ಮಾನವರನ್ನು ರಕ್ಷಿಸಲು ಸಮರ್ಥರಲ್ಲ ಧರ್ಮ ಮಾತ್ರವೇ ರಕ್ಷಿಸುತ್ತದೆ ಸಂದೇಹವಿಲ್ಲ.

ಒಟ್ಟಿನಲ್ಲಿ ಈ ಮಾನವಜನ್ಮ ಬಂದಾಗ ಸಾರ್ಥಕ ಜೀವನ ನಡೆಸಿ ಪರಮಾತ್ಮನನ್ನು ಏಕೋಭಾವದಿಂದ (ಸರ್ವೋತ್ತಮತ್ವೇನ) ಭಜಿಸಲು ಶ್ರೀಹರಿಯು ಭಕ್ತರಿಗೆ ಮೋಕ್ಷಾದಿ ಪುರುಷಾರ್ಥಗಳನ್ನು ಕೊಟ್ಟು ರಕ್ಷಿಸುವನೆಂಬುದಾಗಿ ಇಡೀ ಮಾನವಕುಲಕ್ಕೆ ಶ್ರೀಪುರಂದರದಾಸರು ಎಚ್ಚರಿಕೆ ನೀಡಿದ್ದಾರೆ.

**ಎಂದೆಂದಿಗೂ ನಿನ್ನ ದಾಸನಾಗಬೇಕೋ**
**ಪುರಂದರವಿಠಲನ ಚರಣ ತೋರಬೇಕೋ ॥**

**ಧೀರ ಪುರಂದರವಿಠಲ ನಿನ್ನ ದಯ ತಪ್ಪಿದರೆ**
**ಆರೇನು ಮಾಡುವರು ಅವನಿಯೊಳಗೆ ॥**

**ನಿನ್ನ ಧ್ಯಾನವಕೊಡು ಎನ್ನ ಧನ್ಯನ ಮಾಡು**
**ಪನ್ನಂಗಶಯನ ಶ್ರೀಪುರಂದರವಿಠಲ ॥**

**ಶ್ರೀ ಕೃಷ್ಣಾರ್ಪಣಮಸ್ತು**

**ಲೇಖಕರು:** ಪಂ॥ ಶ್ರೀನಿವಾಸ ಸು. ಮಠದ.